ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆ.**3750/2023**

ಫಿರ್ಯಾದುದಾರರುಃ- ಸರ್ಕಾರದ ಪರವಾಗಿ ಕಡೂರು ಪೊಲೀಸರು

ವಿರುದ್ಧ

ಆರೋಪಿತರುಃ-

ಸುನಿಲ್ ಬಿನ್ ಮಂಜಪ್ಪ, ಸುಮಾರು **31** ವರ್ಷ ,
ವಾಸಃ ಬಿ.ಕೋಡಿಹಳ್ಳಿ ಗ್ರಾಮ, ಬೀರೂರು ಹೋಬಳಿ,
ಕಡೂರು ತಾಃ

ಃದೋಷಾರೋಪಣೆಃ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಹಾಗೂ ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ದಿನಾಂಕಃ 13.02.2023 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಕಡೂರು ಪೋಲೀಸ್ ಠಾಣಾ ಸರಹದ್ದಿನ ಕಡೂರು ಪಟ್ಟಣದ ಹಳೇಪೇಟೆಯಲ್ಲಿರುವ ಶ್ರೀ ಯಲ್ಲಮ್ಮದೇವಿ ದೇವಸ್ಥಾನದ ರಸ್ತೆಯಲ್ಲಿರುವ ಚಾಸಾ-4 ಲೋಕೇಶರವರ ಮನೆ ಹತ್ತಿರ ಬಂದು, ಆರೋಪಿಯಾದ ನೀವು ಚಾಸಾ-4 ರವರಿಗೆ, ಸೂಳೆಮಗನೇ, ಬೋಳಿಮಗನೇ ನೀನು ನನ್ನ ತಂಗಿ ಸುನೀತಾಳಿಗೆ ಏಕೆ ಆಸ್ತಿಯಲ್ಲಿ ಪಾಲು ಕೊಡುತ್ತಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಅಂತೆಯೇ ಚಾಸಾ- 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದುದನ್ನು ಚಾಸಾ-1 ಪಾರ್ವತಮ್ಮರವರು ಆರೋಪಿಯಾದ ನಿಮ್ಮ ಬಳಿ ಪ್ರಶ್ನೆ ಮಾಡಿದ್ದಕ್ಕೆ, ಚಾಸಾ-1 ರವರಿಗೆ ಆರೋಪಿಯಾದ ನೀವು ಹೋಗೆ ಬೇವರ್ಸಿ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಆದಕಾರಣ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ **504** ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದುದನ್ನು ಚಾಸಾ-1 ಪಾರ್ವತಮ್ಮರವರು ಆರೋಪಿಯಾದ ನಿಮ್ಮ ಬಳಿ ಪ್ರಶ್ನೆ ಮಾಡಿದ್ದಕ್ಕೆ, ಆರೋಪಿಯಾದ ನೀವು ಚಾಸಾ-1 ರವರನ್ನು ಕೈಯ್ಯಿಂದ ಎದೆ ಹಿಡಿದು ತಳ್ಳಿ ಕೆಳಗೆ ಬೀಳಿಸಿದ್ದು, ಚಾಸಾ-4 ಲೋಕೇಶ ಮತ್ತು ಚಾಸಾ-5 ಹರೀಶರವರು ಬಿಡಿಸಿಕೊಳ್ಳಲು ಹೋದಾಗ, ಆರೋಪಿಯಾದ ನೀವು ಕೈಯ್ಯಿಂದ ಚಾಸಾ-4 ರವರ ತಲೆಗೆ ಹೊಡೆದು, ನೂಕಿ ಕೆಳಗೆ ಬೀಳಿಸಿ ಬಲಕೈ ಮೊಣಕ್ಕೆಗೆ ಹೊಡೆದು, ಚಾಸಾ-5 ಹರೀಶರವರಿಗೆ ಕೈಯ್ಯಿಂದ, ಮುಷ್ಠಿಯಿಂದ ಎದೆಗೆ ಹೊಡೆದು ತಳ್ಳಿ, ಕೆಳಗೆ ಬೀಳಿಸಿ ಕಾಲಿನಿಂದ ತುಳಿದು, ಬಲಕಾಲಿನ ಹೆಬ್ಬೆರಳಿಗೆ ಸ್ವ

ಇಚ್ಛೆಯಿಂದ ನೋವುಂಟು ಮಾಡಿದ್ದು, ಆದಕಾರಣ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ **323** ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದುದನ್ನು ಚಾಸಾ-1 ಪಾರ್ವತಮ್ಮರವರು ಆರೋಪಿಯಾದ ನಿಮ್ಮ ಬಳಿ ಪ್ರಶ್ನೆ ಮಾಡಿದ್ದಕ್ಕೆ, ಆರೋಪಿಯಾದ ನೀವು ಚಾಸಾ-1 ರವರನ್ನು ಕೈಯ್ಯಿಂದ ಎದೆ ಹಿಡಿದು ತಳ್ಳಿ ಕೆಳಗೆ ಬೀಳಿಸಿ ಮಹಿಳೆ ಮೇಲೆ ಹಲ್ಲೆ ಮಾಡಿರುತ್ತೀರಿ. ಆದಕಾರಣ ಆರೋಪಿಯೂದ ನೀವು ಭಾರತೀಯ ದಂಡ ಸಂಹಿತೆ ಕಲಂ **354** ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಚಾಸಾ-1, 4 ಮತ್ತು 5 ರವರಿಗೆ ಸೂಳೆಮಕ್ಕಳಾ ನೀವು ಎಷ್ಟು ಜನ ಇದ್ದೀರಿ ಬನ್ನಿ ನಿಮ್ಮೆಲ್ಲರನ್ನೂ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಉಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರ: ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರ: ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆಯಾಗಬೇಕು.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 28 ನೇ ಮೇ ಮಾಹೆ 2025.

-ಸಹಿ-
**(ಸವಿತರಾಣಿ ಹೆಚ್.ವಿ),**
ಪ್ರಭಾರ ಪ್ರಧಾನ ಪ್ರದನ್ಯಾದಂ.,ಗಳು
ಕಡೂರು.